

# ಕಾಡು ಮೇಡು ಮತ್ತು ಬೇರ್ ಗ್ರಿಲ್ಸ್

‘ಡಿಸ್ಕವರಿ ಚಾನಲ್’ ನೋಡುವವರಿಗೆ ಬೇರ್ ಗ್ರಿಲ್ಸ್ ಅವರದು ಪರಿಚಿತ ಮುಖ. ಪ್ರಧಾನಿ ನರೇಂದ್ರ ಮೋದಿ, ಸೂಪರ್ ಸ್ಟಾರ್‌ಗಳಾದ ರಜನಿಕಾಂತ್ ಮತ್ತು ಅಕ್ಷಯ್‌ಕುಮಾರ್ ಸೇರಿದಂತೆ ಸೆಲೆಬ್ರಿಟಿಗಳೊಂದಿಗೆ ಕಾಡು ಸುತ್ತುವ ಮೂಲಕ ತಮ್ಮ ಜನಪ್ರಿಯತೆಗೆ ಮತ್ತಷ್ಟು ಗರಿಗಳನ್ನು ಸಿಕ್ಕಿಸಿಕೊಂಡಿರುವ ಬೇರ್ ಗ್ರಿಲ್ಸ್ ಅವರದು ವರ್ಣರಂಜಿತ ವ್ಯಕ್ತಿತ್ವ. ‘ಮ್ಯಾನ್ ವರ್ಸಸ್ ವೈಲ್ಡ್’ ಕಿರುತೆರೆಯಲ್ಲಿನ ಅವರ ಜನಪ್ರಿಯ ಕಾರ್ಯಕ್ರಮ.

■ ಪೃಥ್ವಿರಾಜ್

ಚಿಕ್ಕಂದಿನಿಂದಲೇ ಸಾಹಸಪ್ರವೃತ್ತಿಯನ್ನು ಬೆಳೆಸಿಕೊಂಡ ಗ್ರಿಲ್ಸ್ ಅವರ ಮೊದಲ ಹೆಸರು ಎಡ್ವರ್ಡ್ ಮೈಕೆಲ್ ಗ್ರಿಲ್ಸ್. ಮಗುವಾಗಿದ್ದಾಗ ಅವರ ಸಹೋದರಿ ‘ಬೇರ್’ ಎಂದು ಮುದ್ದಾಗಿ ಕರೆಯುತ್ತಿದ್ದರಂತೆ. ಹಾಗಾಗಿ ಗ್ರಿಲ್ಸ್ ಜೊತೆಗೆ ಬೇರ್ ಸೇರಿಕೊಂಡು ಬೇರ್ ಗ್ರಿಲ್ಸ್ ಆಗಿದೆ.

ಗ್ರಿಲ್ಸ್ ಜನಿಸಿದ್ದು 1974ರ ಜೂನ್ 7ರಂದು, ಲಂಡನ್‌ನಲ್ಲಿ. ಶಾಲಾ ದಿನಗಳಲ್ಲಿ ಸ್ಕೌಟ್ಸ್‌ಗೆ ಸೇರಿ ಪರ್ವತಾರೋಹಣ ಹಾಗೂ ಸೇಲಿಂಗ್ ಮಾಡುವುದರಲ್ಲಿ ಪ್ರಾವೀಣ್ಯತೆ ಪಡೆದರು. ಉನ್ನತ ಶಿಕ್ಷಣಕ್ಕಾಗಿ ಎಟೊನ್ ಕಾಲೇಜಿಗೆ ಸೇರಿದ ಮೇಲೆ ಪರ್ವತಾರೋಹಣದ ಮೇಲಿನ ಮೋಜು ಮತ್ತಷ್ಟು ಹೆಚ್ಚಾಯಿತು. ಆ ಹಂತದಲ್ಲಿ ಕರಾಟೆಯನ್ನೂ ಕಲಿತರು. 18 ತುಂಬುವ ಹೊತ್ತಿಗೆ ಪರ್ವತಾರೋಹಣ, ಸ್ಕೈಡೈವಿಂಗ್ ಸಾಹಸಗಳು ಸಾಮಾನ್ಯವಾಗಿದ್ದವು. ಕರಾಟೆಯಲ್ಲಿ ಬ್ಲ್ಯಾಕ್‌ಬೆಲ್ಟ್ ಒಲಿಯಿತು. ಚಿಕ್ಕ ವಯಸ್ಸಿನಲ್ಲೇ ಬ್ಲ್ಯಾಕ್‌ಬೆಲ್ಟ್ ಪಡೆದ ಕಿರಿಯ ವ್ಯಕ್ತಿಯಾಗಿ ಗ್ರಿಲ್ಸ್ ಲಂಡನ್‌ನಲ್ಲಿ ಸುದ್ದಿಯಾಗಿದ್ದರು.

ಜನಪ್ರಿಯತೆಯ ಹುಮ್ಮಸ್ಸಿನಲ್ಲಿ ಸೇನೆ ಸೇರಿದ ಅವರು, ಬ್ರಿಟನ್‌ನ ವಿಶೇಷ ಮೀಸಲು ಪಡೆಯಲ್ಲಿ ಕಂಬ್ಯಾಟ್ ಸರ್ವೈವಲ್, ಡೆಮಾಲಿಷನ್ಸ್ ಮತ್ತು ಕ್ಲೋಸ್ ಕ್ವಾರ್ಟರ್ ಫೈಟಿಂಗ್ ತರಬೇತಿ ಪಡೆದಿದ್ದಾರೆ.

## ಬೆನ್ನುಮೂಳೆ ಮುರಿಯಿತು

1994ರಲ್ಲಿ ಬೇರ್ ಅವರ ಜೀವನವನ್ನು ಅಂಧಕಾರ ಆವರಿಸಿಕೊಂಡಿತು. ಆ ಅವಧಿಯಲ್ಲಿ ಬ್ರಿಟನ್‌ನ ಹ್ಯಾಡ್ಲಿ ಕೋರ್ಟ್‌ನಲ್ಲಿದ್ದ ಸೇನಾ ಪುನರ್ವಸತಿ ಕೇಂದ್ರಕ್ಕೆ ಅವರನ್ನು ಕಳುಹಿಸಲಾಗಿತ್ತು.